I/366846/2023

**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ,ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

---

ಸಂಖ್ಯೆ: 847251 DPUE-SPR10Misc(Misc)/1/2022-SPORTS

ದಿನಾಂಕ: 07-01-2023

# ಸುತ್ತೋಲೆ

ವಿಷಯ: ದಿನಾಂಕ 15-01-2023 ರಂದು ಯೋಗಾಥಾನ್-2022 ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಯಿಂದ ಸಂಪೂರ್ಣ ಸಹಕಾರ ನೀಡುವ ಬಗ್ಗೆ

ಉಲ್ಲೇಖ:ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳ ಪತ್ರ ಸಂಖ್ಯೆ: ಇಪಿ195:ಎಂ.ಹೆಚ್.ಟಿ. 2022 ದಿನಾಂಕ:05.01.2023.

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, **ಆಜಾದಿ ಕಾ ಅಮೃತ್ ಮಹೋತ್ಸವದ** ಅಂಗವಾಗಿ ದಿನಾಂಕ: 21.06.2022 ರಿಂದ 28.08.2022 ರವರೆಗೆ 75 ದಿನಗಳ ಕಾಲ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಯೋಗಥಾನ್-2022 ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಅಡಿಯಲ್ಲಿ ಯೋಗಾಭ್ಯಾಸವನ್ನು ಕಡ್ಡಾಯಗೊಳಿಸಿರುವುದರಿಂದ ಯೋಗಥಾನ್-2022 ಕಾರ್ಯಕ್ರಮವನ್ನು ಸ್ವಾಮಿ ವಿವೇಕಾನಂದರ ಜಯಂತಿಯ ಅಂಗವಾಗಿ ದಿನಾಂಕ:15.01.2023 ರಂದು ಬೆಳಿಗ್ಗೆ 6.30 ಗಂಟೆಗೆ ಆಯೋಜಿಸುತ್ತಿರುವದರಿಂದ ಜಿಲ್ಲೆಯ ಎಲ್ಲಾ ಪದವಿ ಪೂರ್ವ ಕಾಲೇಜುಗಳ ದೈಹಿಕ ಶಿಕ್ಷಣ ಉಪನ್ಯಾಸಕರನ್ನು YOGA CERTIFICATION BOARD ನಲ್ಲಿ ಯೋಗ ಶಿಕ್ಷಕರಾಗಿ ಮತ್ತು ಎಲ್ಲಾ ವಿದ್ಯಾರ್ಥಿಗಳನ್ನು www.yogathon2022.com ನಲ್ಲಿ ನೋಂದಾಯಿಸಿ ಉಲ್ಲೇಖಿತ ಪತ್ರದಂತೆ ದಿನಾಂಕ: 15.01.2023 ರಂದು ಬೆಳಿಗ್ಗೆ 6.30 ಗಂಟೆಗೆ ರಾಜ್ಯದ ಎಲ್ಲಾ ಜಿಲ್ಲಾಕೇಂದ್ರ ಮತ್ತು ಜಿಲ್ಲೆಗಳ ಪದವಿ ಪೂರ್ವ ಕಾಲೇಜುಗಳ ಆವರಣದಲ್ಲಿ ಯೋಗ ಶಿಷ್ಟಾಚಾರವನ್ನು ಆಧರಿಸಿ ಮಕ್ಕಳಿಗೆ ಯೋಗಾಭ್ಯಾಸವನ್ನು ಮಾಡಿಸಲು ಸೂಚಿಸಿದೆ. ಯೋಗಥಾನ್-2022 ಕಾರ್ಯಕ್ರಮದ ಯಶಸ್ಸಿಗೆ ಸಂಪೂರ್ಣ ಸಹಕರಿಸುವಂತೆ ಕೋರುತ್ತಾ, ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳು ಈ ಕುರಿತು ಸೂಕ್ತ ಕ್ರಮ ಜರುಗಿಸುವಂತೆ ಈ ಮೂಲಕ ತಿಳಿಸಲಾಗಿದೆ.

Signed by Ramachandran R
Date: 07-01-2023 17:35:06

**ಪ್ರತಿಗಳು**

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ.
2. ಸಹಾಯಕ ನಿದೇಶಕರು ಇ-ಆಡಳಿತ ಪದವಿ ಪೂರ್ವ ಶಿಕ್ಷಣ ಇಲಾಖೆ **SATS Portal ಮತ್ತು ಇಲಾಖೆಯ ವೆಬ್ ಸೈಟ್** ನಲ್ಲಿ www.**yogathon2022** ಲಿಂಕ್ ಅಳವಡಿಸಲು ಕ್ರಮಕ್ಕಾಗಿ.
3. ಕಛೇರಿ ಪ್ರತಿ.